**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ**

**ಸಿ.ಸಿ.ನಂ.5279/2023**

ಫಿರ್ಯಾದುದಾರರು : ಶ್ರೀ ವಾಸು @ ವಾಸುದೇವ್ ತಂದೆ ಭೀಮರಾವ್

**ವಿರುದ್ಧ**

ಆಪಾದಿತ : ಶ್ರೀ ಹನಮಂತು ತಂದೆ ತಾಯಪ್ಪ ಪೋರ್ಲ,

**ಆಪಾದನೆ**

**ಶ್ರೀ ಅರುಣ ಚೌಗುಲೆ ಬಿ.ಎ.,ಎಲ್ಎಲ್.ಬಿ.,(Honors) ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆಯನ್ನು ಹೊರಿಸುತ್ತಿದ್ದೇನೆ.**

ಪಿರ್ಯಾದಿದಾರರು ಮತ್ತು ಆಪಾದಿತನಾದ ನೀವು ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ **20.05.2021** ರಂದು ರೂ.**4,50,000/-** ಗಳನ್ನು ಸಾಲಪಡೆದಿದ್ದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತನಾದ ನೀವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗುರಮಠಕಲ್ ಶಾಖೆಗೆ ಸೇರಿದ **679234** ಸಂಖ್ಯೆಯ ಚೆಕ್ ನಲ್ಲಿ ರೂ. **4,50,000/-** ಹಾಗೂ ದಿನಾಂಕ **23.08.2023** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ. ಸದರಿ ಚೆಕ್ನ್ನು ಪಿರ್ಯಾದುದಾರರು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗುರಮಠಕಲ್ ಶಾಖೆಯ ಮೂಲಕ ಹಾಜರು ಪಡಿಸಿದಾಗ**,** “Funds is Insufficient” ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **23.08.2028** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **26.08.2023** ರಂದು ಅಪಾದಿತನಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ನ್ನು ನೀವು ನಿರಾಕರಿಸಿರುತ್ತೀರಿ**.** ಆಪಾದಿತನಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138** ರ ರಿತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ-೧ : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-೨ : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 13.01.2025.
ಸ್ಥಳಃ ಯಾದಗಿರಿ

**ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,**
**ಯಾದಗಿರಿ**

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ

**ಸಿ.ಸಿ. ನಂಃ 394/2019**

ಫಿರ್ಯಾದಿ ಃ ರಾಜ್ಯದ ಪರವಾಗಿ ಗುರುಮಿಠಕಲ್ ಪಿ.ಎಸ್.

// ವಿರುದ್ಧ //

ಆರೋಪಿ ನಂಃ **1.** ವೆಂಕಟೇಶ ತಂದೆ ಸುರೇಂದ್ರಬಾಬು ಲಿಂಗಮ್
ವ ಃ **37** ವರ್ಷ ಸಾಃ ಮನೆ ನಂಬರ **2-4-255/9**
ಸಿಐಬಿ ಕ್ವಾಟರ್ಸ ನೆಹರು ನಗರ ಕಾಚಿಗೂಡ ಹೈದ್ರಾಬಾದ

**2.** ಶಾಂತಕುಮಾರ ತಂದ ಶರಣಯ್ಯಸ್ವಾಮಿ ಮಠಪತಿ
ವ ಃ **31** ವರ್ಷ ದ ಸಾ ಃ ಇಟ್ಕಾಲ್ ಗ್ರಾಮ ತಾಃ ಸೇಡಂ.

**ದಂ.ಪ್ರ.ಸಂ. ಕಲಂ 251 ರಡಿ ಅಪಾದನೆ**

ದಿನಾಂಕಃ 02.12.2018 ರಂದು ಸಾ ಃ ಃ04-30 ಗಂಟೆ ಸುಮಾರಿಗೆ ಗುರುಮಿಠಕಲ್ ಪಟ್ಟಣ ಸೀಮೆಯ ಬುರಬುರ ಬಂಗ್ಲಾ ಕ್ರಾಸ್ ಹತ್ತಿರ 1 ನೇ ಆರೋಪಿಯಾದ ನೀವು ಸಾರ್ವಜನಿಕ ಮುಖ್ಯ ರಸ್ತೆಯ ಮೇಲೆ ನಿಮ್ಮ ಟಿ.ಎಸ್-09-ಇ.ಎಂ-9330 ಸಂಖ್ಯೆಯ ಮಾರಾುತಿ ಬ್ರಿಜಾ ಕಾರನ್ನು ಕೊಡಂಗಲ್ ಕಡೆಯಿಂದ ಗುರುಮಿಠಕಲ್ ಕಡೆಗೆ ಅತಿವೇಗ ಮತ್ತು ಆಲಕ್ಷತನದಿಂದ ಚಲಾಯಿಸಿಕೊಂಡು ಬಂದು ಚಾಸಾ ಃ 1 ರವರ ಮಗ ರಾಮುಲು ಆರೇಳು 2 ನೇ ಆರೋಪಿಗೆ ಸೇರಿದ ಎಪಿ-10-ಕ್ಯೂ-9362 ಸಂಖ್ಯೆಯ ಬೈಕಿನಲ್ಲಿ ಹಿಂಬಂದಿ ಎರಡನೇ ಆರೋಪಿಯನ್ನು ಕೂರಿಸಿಕೊಂಡು ಗುರುಮಿಠಕಲ್ ಕಡಯಿಂದ ಬರುತ್ತಿದ್ದಾಗ ನೀವು ಸದರಿ ಬೈಕಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿದ ಪರಿಣಾಮ ಇಬ್ಬರೂ ಬೈಕ ಸವಾರಿರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಸದರಿ ರಾಮುಲು ಈತನು ಸ್ಥಳದಲ್ಲಿಯೇ ಮೃತಪಟ್ಟಿದು ಈ ಮೂಲಕ 1 ನೇ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 279, 338 ಮತ್ತು 304(A) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

2 ನೇ ಆರೋಪಿಯಾದ ನೀವು ನೊಂದಣಿ ಅವದಿ ಮುಗಿದಿದ್ದು ಮತ್ತು ವಿಮೆ ಇಲ್ಲದ ನಿಮ್ಮ ಬೈಕನ್ನು ಮೃತ ರಾಮುಲು ಈತನಿಗೆ ಚಾಲನೆ ಮಾಡಲು ಕೊಟ್ಟಿದ್ದು ಈ ಮೂಲಕ ಮೋಟಾರು ವಾಹನಗಳ ಅದಿನಿಯಮ, 1988 ಕಲಂ.192 ಎ ಹಾಗೂ 196 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿದ್ದೀರೆಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಆರೋಪಿತರ ಹೇಳಿಕೆ

ಪ್ರಃ 1. ಆಪಾದನೆ ಓದಿ ಹೇಳಿದ್ದು ತಿಳಿಯಿತಾ ಹೇಗೆ?

ಉತ್ತರಃ ಅರೋಪಿ ನಂ.1

ಅರೋಪಿ ನಂ.2

ಪ್ರಃ 2. ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಪ್ರತಿರಕ್ಷಣೆ ಇದೆಯಾ?

ಉತ್ತರಃ ಆರೋಪಿ ನಂ. 1-

ಆರೋಪಿ ನಂ. 2-

( ಆಪಾದನೆಯನ್ನು ಈ ದಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ)

ದಿಃ 10.06.2024

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಯಾದಗಿರಿ.

**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ</u>**

**<u>ಸಿ.ಸಿ.ನಂ.1245/2022</u>**

ಫಿರ್ಯಾದುದಾರರು : ಶ್ರೀ ರವಿಕುಮಾರ ತಂದೆ ಸುರೇಶ್ ಬಾಬು.

**<u>ವಿರುದ್ಧ</u>**

ಆಪಾದಿತ : ಶ್ರೀಮತಿ. ರೇಣುಕಾ ಗಂಡ ಕರಬಸಯ್ಯ.

**<u>ಆಪಾದನೆ</u>**

**ಶ್ರೀ ಅರುಣ ಚೌಗುಲೆ ಬಿ.ಎ.,ಎಲ್ಎಲ್.ಬಿ.,(Honors) ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಯಾದಗಿರಿ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಕೆಳಕಂಡಂತೆ ದೋಷರೋಪಣೆಯನ್ನು ಹೊರಿಸುತ್ತಿದ್ದೇನೆ.**

ಪಿರ್ಯಾದಿದಾರರು ಮತ್ತು ಆಪಾದಿತಳಾದ ನೀವು ಸುಮಾರು ವರ್ಷಗಳಿಂದ ಪರಿಚಯಸ್ಥರಾಗಿರುತ್ತೀರಿ ಹಾಗೂ ಸದರಿ ಪರಿಚಯದ ಆಧಾರದ ಮೇಲೆ ನೀವು ದೂರುದಾರರಿಂದ ದಿನಾಂಕ **21.05.2020** ರಂದು ರೂ. **3,00,000/-** ಗಳನ್ನು

ಸಾಲಪಡೆದಿದ್ದು, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆಪಾದಿತಳಾದ ನೀವು ದಿನಾಂಕ **07.05.2022** ರಂದು ನೀವು ಖಾತೆ ಹೊಂದಿರುವ ಭಾರತೀಯ ಸ್ಟೇಟ್ ಬ್ಯಾಂಕ್, ಎ.ಡಿ.ಬಿ, ಯಾದಗಿರಿ ಶಾಖೆಗೆ ಸೇರಿದ **476102** ಸಂಖ್ಯೆಯ ಚೆಕ್ ನಲ್ಲಿ ರೂ.**3,30,000/-**ಹಾಗೂ ದಿನಾಂಕ **17-05-2022** ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದಿರಿ. ಸದರಿ ಚೆಕ್‌ನ್ನು ಪಿರ್ಯಾದುದಾರರು ದಿನಾಂಕ **17.05.2022** ರಂದು ನಗದೀರಣಕ್ಕಾಗಿ ತಾವು ಖಾತೆ ಹೊಂದಿರುವ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್, ಯಾದಗಿರಿ ಶಾಖೆಯ ಮೂಲಕ ಹಾಜರು ಪಡಿಸಿದಾಗ**,** "ಸಾಕಷ್ಟ ಹಣ ಇಲ್ಲ" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ಚೆಕ್ಕನ್ನು ದಿನಾಂಕ **18.05.2022** ರಂದು ವಾಪಸ್ಸು ನೀಡಿರುತ್ತಾರೆ. ನಂತರ ಪಿರ್ಯಾದುದಾರರು ತಮ್ಮ ವಕೀಲರ ಮೂಲಕ ದಿನಾಂಕ **15.06.2022** ರಂದು ಅಪಾದಿತಳಾದ ನಿಮ್ಮ ವಿಳಾಸಕ್ಕೆ ನೊಂದಾಯಿತ ಅಂಚೆಯ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿನಾಂಕ **21-06-2022** ರಂದು "ನಿರಾಕರಿಸಿರುತ್ತಾರೆ" ಎಂಬ ಹಿಂಬರಹದೊಂದಿಗೆ ಮರಳಿ ಬಂದಿರುತ್ತದೆ. ಆಪಾದಿತಳಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರು ದೂರುದಾರರಿಗೆ ಚೆಕ್ ನ್ನು ನೀಡಿ ನಂತರ ಚೆಕ್ ಮೊತ್ತವನ್ನು ಪಾವತಿ ಮಾಡದೆ ಇರುವುದರ ಮೂಲಕ ವರ್ಗಾವಣೀಯ ಲಿಖಿತ ಕಾಯ್ದೆ ಕಲಂ **138**ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ-೧ : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-೨ : ನೀವು ಸದರೀ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ ?

ಉತ್ತರ :

ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕ: 30.05.2024.
ಸ್ಥಳ: ಯಾದಗಿರಿ

ಸಹಿ/-
**ದಿವಾಣಿ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಗದಗ**